

ಇಂಥವನನ್ನು ನಂಬುವುದಾದರೂ ಹೇಗೆ? ಇವನಂಥವನೊಡನೆ ಜೀವನವೇ ಮುಗಿಯಿತು. ಎಲ್ಲಾ ಮುಗಿಯಿತು. ಇನ್ನಿವನನ್ನು ಖಂಡಿತಾ ನಾನು ನಂಬಲಾರೆ.

ಅಪನಂಬಿಕೆಯೇ? ನಿಜ, ಒಪ್ಪುತ್ತಿರಲಿಲ್ಲ; ಆದರೆ ತನಗೆ ಹೇಳುವಷ್ಟು ನಿಷ್ಠೆಯಾದರೂ ಇತ್ತು ಎಂದಾದರೂ ಅನ್ನಿಸುತ್ತಿತ್ತು. ಮೂರನೆಯವರೊಬ್ಬರಿಂದ ಅವನಿಂದಾದದ್ದನ್ನು ತಿಳಿದು, ತಲೆಯ ಮೇಲೇ ಸಿಡಿಲು ಹೊಡೆಯುವುದಕ್ಕಿಂತ, ದೂರದಲ್ಲೆಲ್ಲೋ ಗುಡುಗು ಕೇಳಿ, ಮಿಂಚು ಹೊಡೆದಿದ್ದರೆ ತಪ್ಪಿಸಲು ಒಂದಷ್ಟು ಪ್ರಯತ್ನ ಪಡಬಹುದಿತ್ತೇನೋ. ಅದಕ್ಕೇ ತಿಳಿಸಿಲ್ಲ ಬೇಶರಮ್! ಇಂಥವನನ್ನು ನಂಬುವುದಾದರೂ ಹೇಗೆ? ಇವನಂಥವನೊಡನೆ ಜೀವನವೇ ಮುಗಿಯಿತು, ಎಲ್ಲಾ ಮುಗಿಯಿತು. ಇನ್ನಿವನನ್ನು ಖಂಡಿತಾ ನಾನು ನಂಬಲಾರೆ.

ಅವನ ಮನದಲ್ಲೂ ಚಿಂತೆಯ, ವಿಷಾದದ, ಪಶ್ಚಾತ್ತಾಪದ ಸುನಾಮಿಯ ಅಲೆಗಳೇಳಲು ಆರಂಭಿಸಿದ್ದವು. ಆದರೆ ಆ ಅಲೆಗಳಿಗೆ ಅವಳೆದೆಯ ಜ್ವಾಲಾಗ್ನಿಯನ್ನು ನಂದಿಸಲು ಸಾಧ್ಯವಿಲ್ಲ ಎನ್ನುವ ಅರಿವಿತ್ತು. ತಪ್ಪಾಗಿದೆಯೆನ್ನುವುದು ನಿಜ. ಆದರೆ ಅದನ್ನು ಮಾಡಲೇಬೇಕಾದ ಸಂದರ್ಭವಿತ್ತು ಎನ್ನುವುದನ್ನು ಅವಳಷ್ಟು ಅರ್ಥ ಮಾಡಿಕೊಳ್ಳಬಹುದಿತ್ತೇನೋ. ಅವಳ ಭಾವನೆಗಳನ್ನು ನಾನು ಹಗುರಾಗಿ ತೆಗೆದುಕೊಂಡೆನೇ. ಆ ಸಮಯದಲ್ಲಿ ಅವಳಿಗಿಂತಲೂ ಆ ಗಳಿಗೆಗೆ ಅದನ್ನು ಮಾಡುವುದೇ ಮುಖ್ಯವೆಂದು ಅನ್ನಿಸಿದ್ದು ತಪ್ಪಾಯಿತೆ? ಮಾಡದಿದ್ದರೆ ಜನ್ಮಪೂರ್ತಿ ನನ್ನನ್ನು ಕ್ಷಮಿಸಿಕೊಳ್ಳಲು ಸಾಧ್ಯವಿತ್ತೇ. ಅಷ್ಟು ನಿರ್ಮಮಕಾರವಾಗಿ ಯೋಚಿಸಲು ತನ್ನಿಂದ ಸಾಧ್ಯವಿತ್ತೇ? ಬಗೆಹರಿಯಲಿಲ್ಲ. ಅವಳ ಎಲ್ಲಾ ನಂಬಿಕೆ, ವಿಶ್ವಾಸವನ್ನು ಇದೊಂದರಿಂದ ಕಳೆದು ಕೊಂಡುಬಿಟ್ಟೆನೆ? ಮೊದಲಿನಂತಾಗಲು ಸಾಧ್ಯವೇ? ತಲೆ ಕೊಡಹಿದ. ಬಗೆಹರಿಯಲಿಲ್ಲ.

ಮಧ್ಯಾಹ್ನವೂ ಕಳೆದು ಸಂಜೆಯಾಗತೊಡಗಿತು. ಸೂರ್ಯ ಮುಖ ತೋರಲಿಲ್ಲ. ಇಬ್ಬರೂ ಅವರವರದೇ ಲೋಕದಲ್ಲಿ ಕಳೆದುಹೋದರು. ಕೋಣೆಯಿಂದ ಅವಳು ಹೊರಬರಲಿಲ್ಲ; ಬಾಲ್ಕನಿಯಿಂದ ಇವನು ಒಳಹೋಗಲಿಲ್ಲ. ಹಾಗೆಯೇ ಸಂಜೆಯೂ ಕಳೆದುಹೋಯಿತು. ಕತ್ತಲಿನಲ್ಲಿ ಆಕಾಶದಲ್ಲಿ ದೂರದಲ್ಲೆಲ್ಲೋ ಮಿಂಚುತ್ತಿರುವುದು ಕಾಣುತ್ತಿದೆ. ಎಷ್ಟೋ ದೂರದಲ್ಲಿ ಸಣ್ಣಗೆ ಗುಡುಗಿನ ಸದ್ದು ಕೇಳುತ್ತಿದೆ. ಎಲ್ಲಿಂದಲೋ ಮೆಲ್ಲನೆ ತಣ್ಣನೆಯ ಗಾಳಿ ಸುಳಿಯುತ್ತಾ ಮಳೆ ಸುರಿಯಬಹುದೇನೋ ಎನ್ನುವ ನಿರೀಕ್ಷೆಯನ್ನು ಹುಟ್ಟುಹಾಕುತ್ತಿದೆ. ಇಬ್ಬರಿಗೂ ಬೆಳಗಿನಿಂದಲೂ ಅರಿವಿಗೆ ಬಂದಿರದಿದ್ದ ಹಸಿವು ಈಗ ಹೊಟ್ಟೆಯಲ್ಲಿ ಸಂಕಟದ ಅಲೆಗಳನ್ನು ಎಬ್ಬಿಸುತ್ತಿದೆ. ನಾಳಿನ ಬೆಳಗಿಗೆ ಇಬ್ಬರೂ ತಯಾರಾಗಬೇಕಿದೆ. ಆದರೂ ಇಬ್ಬರಿಗೂ ಎದ್ದೇಳಲು ಏನೋ ಹಿಂಜರಿಕೆ.

ರಾತ್ರಿಯಾಯಿತು. ಸಣ್ಣಗೆ ಮಳೆ ಹನಿಯಲು ಆರಂಭವಾಗಿ ಕರೆಂಟು ಹೋಯಿತು. ಜಗವೆಲ್ಲಾ ನಿದ್ರೆಗೆ ಜಾರತೊಡಗಿತು. ಸಂಕಟ ತಾಳಲಾಗದೆ ಕತ್ತಲಲ್ಲೇ ಎದ್ದುಬಂದವಳು ಅಡುಗೆಮನೆ ಹೊಕ್ಕು ಮೋಂಬತ್ತಿ ಹಚ್ಚಿಕೊಂಡು ಬೆಳಗ್ಗೆಯೇ ಫ್ರಿಜ್ಜಿನಿಂದ ತೆಗೆದಿಟ್ಟು ಈಗ ಹುಳಿ ಬಂದುಹೋಗಿದ್ದ ಇಡ್ಲಿ ಹಿಟ್ಟನ್ನು ತಟ್ಟೆಗಳಿಗೆ ಸುರಿದು ಬೇಯಲಿಟ್ಟಳು. ಹಿಂದೆಯೇ ಅವನೂ ಎದ್ದು ಬಂದು ಹಿಂದಿನ ದಿನದ ಸಾಂಬಾರನ್ನು ಫ್ರಿಜ್ಜಿನಿಂದ ತೆಗೆದು ಅಡುಗೆ ಕಟ್ಟೆಯ ಮೇಲಿಟ್ಟು, ಡೈನಿಂಗ್ ಟೇಬಲ್ಲಿನ ಮೇಲೆ ತಟ್ಟೆ, ನೀರಿನ ಲೋಟಗಳನ್ನು ಜೋಡಿಸಿ ಎಮರ್ಜೆನ್ಸಿ ದೀಪವನ್ನು ಹಚ್ಚಿಟ್ಟ. ಬಿಸಿಬಿಸಿಯಾದ ಹುಳಿ ಹುಳಿ ಇಡ್ಲಿಗೆ ಇನ್ನೇನು ಹಳಸಲು ಬಂದಿದ್ದ ಸಾಂಬಾರನ್ನು ನೆಂಚಿಕೊಂಡು ಇಬ್ಬರೂ ಮೌನವಾಗಿಯೇ ತಿಂದು ಮುಗಿಸಿದರು. ಅವಳು ಅಡುಗೆ ಕಟ್ಟೆಯನ್ನು ಒರೆಸಲು ಹೋದರೆ ಇವನು ಡೈನಿಂಗ್ ಟೇಬಲ್ಲನ್ನು ಶುಚಿಮಾಡಿದ.

ಮೌನದಲ್ಲೇ ಕದನ ವಿರಾಮವಾಗಿತ್ತು. ಏಕೆಂದರೆ ಅವರಿಬ್ಬರ ತಲೆಯ ಮೇಲೂ ಇದ್ದದ್ದು ಒಂದೇ ಸೂರು ಹಂಚಿಕೊಳ್ಳಲು ಒಂದೇ ಹಾಸಿಗೆ ಹಾಗೆಯೇ ಇರಲೇಬೇಕಾದ ಅನಿವಾರ್ಯತೆ.

ಪ್ರತಿಕ್ರಿಯಿಸಿ: **feedback@sudha.co.in**